ತಾವೇ ಹಿಂದೊಮ್ಮೆ ರಂಗಶಂಕರದಲ್ಲಿ ತೆಗೆಸಿಕೊಂಡಿದ್ದ ಫೋಟೊವನ್ನು ಕಳಿಸಿಕೊಟ್ಟರು. ಫೋಟೊ ನೋಡಿದ ತಕ್ಷಣವೇ ಶ್ರೀಧರ್ ಅವರನ್ನು ಕರೆಸಿಕೊಂಡ ವಿಜಯ್ ಅವರಿಗೆ ನಾಯಕನ ಹದಿವಯಸ್ಸಿನ ಪಾತ್ರವನ್ನು ಕೊಟ್ಟುಬಿಟ್ಟರು.

'ಈ ಪಾತ್ರವನ್ನು ನೀನು ಮಾಡು ಎಂದು ಹೇಳಿದಾಗಲೂ ನನಗೆ ಆ ಪಾತ್ರದ ಮಹತ್ವ ಅಷ್ಟಾಗಿ ಗೊತ್ತಿರಲಿಲ್ಲ. ವಿಜಯ್ ಅವರ ಹರೆಯದ ಪಾತ್ರ ಎಂದು ಗೊತ್ತಿತ್ತು. ಹಾಗಾಗಿ ಅವರ ಮ್ಯಾನರಿಸಂ ಅನ್ನು ಸೂಕ್ಷ್ಮವಾಗಿ ಗಮನಿಸಿ ಅದನ್ನು ನನ್ನ ಅಭಿನಯದಲ್ಲಿ ತಂದುಕೊಳ್ಳಲು ಯತ್ನಿಸಿದ್ದೆ. ಆದರೆ ನನ್ನ ಪಾತ್ರಕ್ಕೆ ಸಿನಿಮಾದಲ್ಲಿ ಇಷ್ಟೊಂದು ಮಹತ್ವ ಇದೆ ಎಂದಾಗಲಿ, ಜನರಿಂದ ಇಷ್ಟು ಅದ್ಭುತ ಪ್ರತಿಕ್ರಿಯೆ ದೊರಕುತ್ತದೆ ಅಂತಾಗಲಿ ಕನಸು ಮನಸಿನಲ್ಲಿಯೂ ಅಂದುಕೊಂಡಿರಲಿಲ್ಲ. ಎಲ್ಲ ಜನರೂ ಮೆಚ್ಚಿಕೊಂಡಿದ್ದಾರೆ. ದೊಡ್ಡ ದೊಡ್ಡ ನಟರಿಗೆಲ್ಲ ನನ್ನನ್ನು ಹೋಲಿಸುತ್ತಿದ್ದಾರೆ. ಅವರ ಪ್ರೀತಿ ನೋಡಿ ನಿಜಕ್ಕೂ ಏನು ಹೇಳಬೇಕು ತಿಳಿಯುತ್ತಿಲ್ಲ. ಹೌದಾ ಎಂದು ಕೇಳಿ ಸುಮ್ಮನಾಗುತ್ತಿದ್ದೇನೆ' ಎಂದು ಭಾವುಕರಾಗಿಯೇ ಹೇಳುತ್ತಾರೆ ಶ್ರೀಧರ್.

ರಂಗಭೂಮಿಯ ನಂಟನ್ನು ಪೂರ್ತಿಯಾಗಿ ಬಿಡದೆ ಸಿನಿಮಾ ಕ್ಷೇತ್ರದಲ್ಲಿ ಬೆಳೆಯುವ ಆಸೆ ಶ್ರೀಧರ್ ಅವರಿಗೆ ಇದೆ. 'ನನಗೆ ಎಲ್ಲ ರೀತಿಯ ಪಾತ್ರಗಳನ್ನೂ ಟಚ್ ಮಾಡಬೇಕು ಎಂಬ ಆಸೆ ಇದೆ. ಈ ಪಾತ್ರಕ್ಕೆ ಸಿಕ್ಕ ಸ್ಪಂದನದ ಬಗ್ಗೆ ಖುಷಿಯಿದೆ. ಹಾಗೆಂದು ಇಂಥ ಪಾತ್ರಕ್ಕೇ ಅಂಟಿಕೊಳ್ಳುವುದಿಲ್ಲ. ಇದೇ ಸಿನಿಮಾದ ಕೆಂಡ ಎಂಬ ಪಾತ್ರ, ಧನಂಜಯ್ ಅವರು ಮಾಡಿದ ಪೊಲೀಸ್ ಅಧಿಕಾರಿಯ ಪಾತ್ರಗಳೂ ನನಗೆ ಇಷ್ಟ. ಅಂಥ ಪಾತ್ರಗಳಲ್ಲಿ ನಟಿಸುವ ಆಸೆ ಇದೆ. ತುಂಬ ರಾ ಆಗಿರುವ, ಸಹಜವಾಗಿರುವ ಪಾತ್ರಗಳಲ್ಲಿ ಕಾಣಿಸಿಕೊಳ್ಳಲು ಇಷ್ಟ' ಎನ್ನುತ್ತಾರೆ ಅವರು.

'ನಟನೆ ಎನ್ನುವುದು ಮರುಸೃಷ್ಟಿಯ ಕೆಲಸ. ವಾಸ್ತವದಲ್ಲೋ ಕಲ್ಪನೆಯಲ್ಲೋ ಇರುವ ಪಾತ್ರಗಳನ್ನು ನಮ್ಮ ನಟನಾಪ್ರತಿಭೆಯ ಮೂಲಕ ಮತ್ತೆ ಜೀವ ತುಂಬುವ ಕೆಲಸವನ್ನು ಮಾಡುವುದೇ ನಟನೆ' ಎನ್ನುವ ಶ್ರೀಧರ್ ಅವರಿಗೆ ಕನ್ನಡ ಚಿತ್ರರಂಗದಲ್ಲಿ ಎಂದೆಂದೂ ಅಚ್ಚಳಿಯದ ಹಲವು ಪಾತ್ರಗಳನ್ನು ಮರುಸೃಷ್ಟಿಸುವ ಮಹತ್ವಾಕಾಂಕ್ಷೆ ಮತ್ತು ಪ್ರತಿಭೆ ಎರಡೂ ಇದೆ. ■








# ಪ್ರಶಸ್ತಿಯ ಖುಷಿಯಲ್ಲಿ ಪೆದ್ರೊ

'ಕುರ್ಲಿ' ಮತ್ತು 'ನಮಗೆ ನಾವೇ ಗೋಡೆಗೆ ಮಣ್ಣು' ಎಂಬ ಎರಡು ಕಿರುಚಿತ್ರಗಳ ಮೂಲಕವೇ 'ತಮ್ಮ ಕಥೆಯೇ ಬೇರೆ' ಎಂದು ಸಾಬೀತು ಮಾಡಿದ್ದ ಯುವ ನಿರ್ದೇಶಕ ನಟೇಶ ಹೆಗಡೆ. ಅವರ ಕಥೆಗೀಗ ಪ್ರಶಸ್ತಿಯ ಗರಿಯೂ ಮೂಡಿದೆ. ನಟೇಶ ನಿರ್ದೇಶನದ 'ಪೆದ್ರೊ' ಸಿನಿಮಾ ಚೀನಾದ ಪಿಂಗ್ಯಾವೊ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪಾಲ್ಗೊಂಡು, ರಾಬರ್ಟ್ ರೋಸಲಿನಿ ಹೆಸರಿನಲ್ಲಿ ಕೊಡುವ 'ಅತ್ಯುತ್ತಮ ನಿರ್ದೇಶಕ' ಪ್ರಶಸ್ತಿಯನ್ನೂ ಪಡೆದುಕೊಂಡಿದೆ.

ಕಳೆದ ವರ್ಷವೇ ಪೂರ್ಣಗೊಂಡಿದ್ದ 'ಪೆದ್ರೊ' ಕೊರೊನಾ ಕಾರಣದಿಂದ ಕೂತಲ್ಲಿಯೇ ಕೂತಿತ್ತು. ಈ ವರ್ಷದ ಚಿತ್ರೋತ್ಸವ ಯಾತ್ರೆಯಲ್ಲಿ ಅದು ಪ್ರಯಾಣವನ್ನು ಆರಂಭಿಸಿದೆ. 'ಬೂಸಾನ್' ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡ ಮೊದಲ ಕನ್ನಡ ಸಿನಿಮಾ ಎಂಬ ಅಗ್ಗಳಿಕೆಯೂ ಈ ಚಿತ್ರಕ್ಕೆ ದಕ್ಕಿದೆ. ಭರತ್ ಮಿರ್ಲೆ ಅವರು ನಿರ್ದೇಶಿಸಿದ ಡಾಕ್ಯೂಫಿಲಂ 'ದ ರೋಡ್ ಟು ಕುರ್ಥಿಯಾರ್' ಕೂಡ ಪ್ರದರ್ಶನ ಕಂಡಿತ್ತು.

ಇಂಗ್ಲೆಂಡ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿಯೂ 'ಪೆದ್ರೊ' ಪ್ರದರ್ಶನ ಕಂಡಿದೆ.

ನಟ, ನಿರ್ದೇಶನ ರಿಷಭ್ ಶೆಟ್ಟಿ 'ಪೆದ್ರೊ' ಸಿನಿಮಾವನ್ನು ನಿರ್ಮಿಸಿದ್ದಾರೆ. ರಾಜ್ ಬಿ. ಶೆಟ್ಟಿ ಈ ಚಿತ್ರದಲ್ಲಿ ನಟಿಸಿದ್ದಾರೆ. ನಟೇಶ ಅವರ ತಂದೆ ಗೋಪಾಲಕೃಷ್ಣ ಹೆಗಡೆ ಅವರೇ ಮುಖ್ಯಪಾತ್ರದಲ್ಲಿ ನಟಿಸಿರುವುದು ವಿಶೇಷ.

ಒಂದು ಹಳ್ಳಿಯಲ್ಲಿ ಆಕಸ್ಮಿಕವಾಗಿ ನಡೆಯುವ ಪುಟ್ಟ ಘಟನೆಯೊಂದು ಹೇಗೆ ಇಡೀ ಹಳ್ಳಿಯ ಬದುಕನ್ನು ಕಲಕುತ್ತದೆ ಎಂಬುದನ್ನು ಚಿತ್ರ ಬಹುಸೂಕ್ಷ್ಮವಾಗಿ ಕಟ್ಟಿಕೊಡುತ್ತದೆ. ಗ್ರಾಮಬದುಕಿನಲ್ಲಿನ ಕ್ರೌರ್ಯಗಳು, ವರ್ಗವ್ಯವಸ್ಥೆ, ಸಂಕೀರ್ಣವಾದ ಮನುಷ್ಯ ಸಂಘರ್ಷ ಎಲ್ಲವೂ ಈ ಚಿತ್ರದಲ್ಲಿ ತುಂಬ ಅಚ್ಚುಕಟ್ಟಾಗಿ ಮೂಡಿಬಂದಿವೆ.

'ತಿಥಿ' ಸಿನಿಮಾದ ನಂತರ ಮತ್ತೊಮ್ಮೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಸಿನಿಮಾವೊಂದರ ಕುರಿತು ಚರ್ಚೆಯಾಗುತ್ತಿರುವುದು ಶುಭ ಸೂಚನೆಯಷ್ಟೇ ಅಲ್ಲ, ಕನ್ನಡ ಚಿತ್ರರಂಗದ ಅಗತ್ಯವೂ ಹೌದು. ■